
ಪೆಡ್ಲರ್ ಒಬ್ಬನ ಜೊತೆ ಜಗಳದಲ್ಲಿ ಕೊಲೆಯಾದ ತನ್ನಪ್ಪನ ಸಾವಿನಿಂದಾಗಿ - ಆಸ್ಟ್ರೇಲಿಯಾಗೆ ಮರಳಿ, ಅಪ್ಪನ ಕ್ಯಾಸಿನೊ, ಸ್ಪಾ ಮುಚ್ಚಿ ಸಿಡ್ನಿಯ ಯೂನಿವರ್ಸಿಟಿಯಲ್ಲಿ ಕಲಿಸುತ್ತಿದ್ದಾಳೆ. ಆಪ್ತ ರೂಮ್‌ಮೇಟ್ ಆಗಿದ್ದ ವಿಲಿಯಂ ಜಾಗವನ್ನು ಶ್ರೀನಿಧಿಯೊಂದಿಗೇ ಇಂಜಿನಿಯರಿಂಗ್ ಓದಿ ಈಗ ಅದೇ ಕೆಮಿಕಲ್ ಫ್ಯಾಕ್ಟರಿಯಲ್ಲಿ ಸಹೋದ್ಯೋಗಿಯಾಗಿರುವ ಚಂದ್ರ ಮೋಹನ ತುಂಬಿದ್ದಾನೆ.

* * *

ಗಡಿನಾಡು ಬಾಗೇಪಲ್ಲಿಯ ಚಂದ್ರ ಮೋಹನನೂ ಶ್ರೀನಿಧಿಯಂತೇ ಗಣಿತ ಬೇಡದೇ ಕೆಮಿಕಲ್ ಇಂಜಿನಿಯರಿಂಗ್ ಓದಿದವನು. ತನ್ನ ಮನೆ ಮಾತು ತೆಲುಗು, ತನ್ನಮ್ಮನ ತವರಿನ ಭಾಷೆ ತಮಿಳು ಎರಡೂ ಸರಾಗವಾಗಿ ಬರ್ತಿದ್ದರೂ ಕನ್ನಡವನ್ನು ಸುಸ್ಪಷ್ಟವಾಗಿ ಮಾತಾಡಬಲ್ಲ ಅವ ಕನ್ನಡದ ಸಾಹಿತ್ಯವನ್ನೂ ಓದಿಕೊಂಡಿದ್ದ. ಸಾಹಿತ್ಯದ ಮೂಲಕ ನವಿರು ಕನ್ನಡತನ, ತೆಲುಗು ತಮಿಳು ಸಿನಿಮಾಗಳ ಪ್ರಭಾವದಲ್ಲಿ ರೂಕ್ಷ ಯಜಮಾನಿಕೆಯ ಸ್ವಭಾವ ಹೊಂದಿದ್ದ ಚಂದ್ರ ಮೋಹನನಿಗೆ 'ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ' ಎಂದೇ ಕರೆಯುತ್ತಿದ್ದ ನಿಧಿ.



ಆಸ್ಟ್ರೇಲಿಯಾ ಸೇರಿದ್ದರೂ ಕ್ಯಾಥರೀನ್‌ಳಿಗೆ ಶ್ರೀನಿಧಿಯೇ ಅಂತರಂಗದ ಗೆಳೆಯ. ಅವಳ ಬದುಕು, ಬವಣೆ, ಉದ್ಯೋಗ... ಎಲ್ಲದರ ಸಣ್ಣ ಸಣ್ಣ ವಿವರವನ್ನೂ ಇವನೊಂದಿಗೆ ಹಂಚಿಕೊಳ್ಳದೇ ಅವಳಿಗೆ ಸಮಾಧಾನ ಸಿಗುತ್ತಿರಲಿಲ್ಲ. ಫೋನಿನಲ್ಲಿ, ವೀಡಿಯೋ ಕಾಲ್‌ನಲ್ಲಿ, ಸ್ಕೈಪ್ ಎಂಬ ಜಾಲತಾಣದಲ್ಲಿ ಹರಟುತ್ತಿದ್ದ ಇವರ ನಡುವಿನ ಸ್ನೇಹ ಬಾಂಧವ್ಯ ಬೇರೆಯವರಿಗೆ ಸುಲಭದಲ್ಲಿ ಅರ್ಥವೂ ಆಗುತ್ತಿರಲಿಲ್ಲ. ಆದರೆ ಅದನ್ನೂ ಅರ್ಥೈಸಿಕೊಂಡದ್ದು ಚಂದ್ರ ಮೋಹನ! ಅವನೆದುರಿಗೆ ತಮ್ಮ ಸ್ನೇಹ ಆರಂಭವಾದ ಬಗೆ, ಅವರಿಬ್ಬರ ಆತ್ಮೀಯ ಒಡನಾಟದ ಶಕೆ, ಪರಸ್ಪರರ ಇಷ್ಟ ಕಷ್ಟಗಳನ್ನು ಸವಿವರವಾಗಿ ಶ್ರೀನಿಧಿ ಹೇಳಿದ್ದ. ಆದರೆ ಅದರಲ್ಲಿ ಕ್ಯಾಥರೀನ್‌ಳ ಬಾಲ್ಯ, ಬದುಕು, ಅವಳ ಸ್ಪಾ ಅನುಭವಗಳು ಮತ್ತು ಇವರಿಬ್ಬರ ಡೇಟಿಂಗ್‌ನಂತಹ ಯಾವ ವಿವರಗಳನ್ನೂ ಬಾಯಿ ಬಿಟ್ಟಿರಲಿಲ್ಲ. ಹಾಗಾಗಿ ಚಂದ್ರ ಮೋಹನನ ಪಾಲಿಗೆ ಕ್ಯಾಥರೀನ್ ಈಗಷ್ಟೇ ಹುಟ್ಟಿದ ಮುಗ್ಧ ಹುಡುಗಿ. ಅವಳಿಗೂ ಚಂದ್ರ ಮೋಹನನೆಂದರೆ ಮೋಹಕವಾಗಿ ಮಾತನಾಡುವ ನಿರ್ಮಲ ಮನದ 'ಮೂನ್'.

'ನಿಧಿ, ನಾನು ಆಸ್ಟ್ರೇಲಿಯಾಗೆ ಹೋಗುತ್ತಿದ್ದೇನೆ'